# ಹಿಂದಿ ಸಾಹಿತ್ಯ ವಿಮರ್ಶಕ ಪ್ರೊ. ರಾಜಕುಮಾರ್ ಅವರೊಂದಿಗೆ ವಿಕ್ರಮ ವಿಸಾಜಿ ನಡೆಸಿರುವ ಸಂದರ್ಶನ

ಪ್ರೊ. ರಾಜಕುಮಾರ್ (1961) ಹಿಂದಿ ಸಾಹಿತ್ಯದ ಮಹತ್ವದ ವಿಮರ್ಶಕರು. ಅಲಾಹಾಬಾದ್ ಜಿಲ್ಲೆಯ ಇಬ್ರಾಹಿಂಪುರ ಹಳ್ಳಿಯಲ್ಲಿ ಹುಟ್ಟಿದ ಅವರು ಅಲಾಹಾಬಾದ್ ವಿಶ್ವವಿದ್ಯಾಲಯದಿಂದ ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದರು. ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಸಿದರು. ವಾರಾಣಸಿಯ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಕಳೆದ ಮೂರು ದಶಕಗಳಿಂದ ಹಿಂದಿ ಪ್ರಾಧ್ಯಾಪಕರಾಗಿದ್ದಾರೆ. ಅಪಾರ ಓದು ಮತ್ತು ವಿದ್ವತ್ತು ಗಳಿಸಿದ ಅವರು ಅಪ್ರಕಟಿತ ಹಸ್ತಪ್ರತಿಗಳ ಪ್ರಕಟಣೆ, ನಿರ್ಲಕ್ಷ್ಯಕ್ಕೆ ಒಳಗಾದ ಕೃತಿಗಳ ಮರುವಿಮರ್ಶೆ, ಜನಮಾನಸದಲ್ಲಿ ಮನೆಮಾಡಿರುವ ಹಲವು ಕೃತಿಗಳ ವಿದ್ವತ್ಪೂರ್ಣ ಸಂಪಾದನೆ ಮಾಡಿದ್ದಾರೆ. ಮಹಾಭಾರತವನ್ನು ಎಂಟು ಖಂಡಗಳಲ್ಲಿ ಸಂಗ್ರಹ, ಸಂಪಾದನೆ ಮತ್ತು ವ್ಯಾಖ್ಯಾನ, ದೇವಿಪುರಾಣದ ಸಂಪಾದನೆ. 'ಮಲ್ಲಿಕಾ ಸಮಗ್ರ' ಎರಡು ಸಂಪುಟಗಳಲ್ಲಿ ಸಂಪಾದನೆ ಮಾಡಿದ್ದಾರೆ. 'ಆಧುನಿಕ್ ಹಿಂದಿ ಸಾಹಿತ್ಯ ಕಾ ಚೌಥಾ ದಶಕ್', 'ಸಾಹಿತ್ಯಿಕ್ ಸಂಸ್ಕೃತಿ ಔರ್ ಆಧುನಿಕತಾ', 'ಹಿಂದಿ ಕಿ ಸಾಹಿತ್ಯಿಕ್ ಸಂಸ್ಕೃತಿ ಔರ್ ಭಾರತೀಯ ಆಧುನಿಕತಾ', 'ಪಾಶ್ಚಾತ್ಯ ಆಲೋಚಕ್ ಔರ್ ಆಲೋಚನಾ', 'ಹಿಂದಿ ಕಿ ಜಾತೀಯ ಸಂಸ್ಕೃತಿ ಔರ್ ಔಪನಿವೇಶಿಕತಾ' ಒಟ್ಟು ಎಂಟು ವಿಮರ್ಶಾ ಕೃತಿಗಳನ್ನು ಪ್ರಕಟಿಸಿದ್ದಾರೆ. ಬೆಲ್ಜಿಯಂ ಮತ್ತು ಸ್ವಿಜ್ಜರ್‌ಲ್ಯಾಂಡ್ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರೂ ಹೌದು. ಯುರೋಪು ಮತ್ತು ಅಮೆರಿಕದ ಹಲವು ವಿಶ್ವವಿದ್ಯಾಲಯಗಳ ವಿವಿಧ ಶೈಕ್ಷಣಿಕ ಯೋಜನೆಗಳಲ್ಲಿ ಸಹಭಾಗಿಯಾಗಿದ್ದಾರೆ.

◆ **ಹಿಂದಿಯ ಪ್ರಸಿದ್ಧ ವಿಮರ್ಶಕ ನಾಮವರ್ ಸಿಂಗ್ ನಿಮ್ಮ ಗುರುಗಳು. ಅವರಿಗೆ ಈ ಹಿಂದೆ ಕನ್ನಡದ ಪ್ರಸಿದ್ಧ ಕವಿ, ಲೇಖಕ ಕುವೆಂಪು ಅವರ ಹೆಸರಿನಲ್ಲಿರುವ ಪ್ರಶಸ್ತಿ ಸಂದಿತ್ತು. ನೀವು ನಿಮ್ಮ ಈ ವಿಮರ್ಶಾ ಗುರುವಿನಿಂದ ಏನನ್ನು ಕಲಿಯಲು ಬಯಸಿದಿರಿ? ಹಾಗೆಯೇ ಏನನ್ನು ಕಲಿಯದೇ ಇರಲು ಇಚ್ಛಿಸಿದಿರಿ?**

ನೀವು ಕೇಳಿದ್ದು ಸರಿಯಾಗಿದೆ. ಎಂಥಾ ಪ್ರೀತಿಯ ಗುರುವೇ ಆಗಿರಲಿ ಅವರಿಂದ ಕಲಿಯುವಂಥದ್ದು ಇರುವಂತೆಯೇ, ಕಲಿಯಬಾರದ್ದೂ ಇರುತ್ತದೆ. ಅಲ್ಲದೆ ಇದೆಲ್ಲ ಸ್ವಂತ ಅಭಿರುಚಿಗಳ ಪ್ರಶ್ನೆ ಕೂಡ ಹೌದು, ವಿಭಿನ್ನ ತಲೆಮಾರುಗಳ ಆಸಕ್ತಿಯ ಪ್ರಶ್ನೆಗಳೂ ಹೌದು. ನಾಮವರ್ ಸಿಂಗ್ ಅವರಿಂದ ಕಲಿಯುವಂಥದ್ದೇ ಹೆಚ್ಚಿತ್ತು. ಅವರೊಬ್ಬ ವಿಶಿಷ್ಟ ಮತ್ತು ಮುಕ್ತ ಓದುಗ. ಒಂದು ಮುಖ್ಯ ಕೃತಿ ಯಾರೇ ಬರೆಯಲಿ ಅದು ಅವರ ಆಸಕ್ತಿ ಕೆರಳಿಸುತ್ತಿತ್ತು. ಹಾಗೆ ನೋಡಿದರೆ ಅವರು ಮಾರ್ಕ್ಸ್‌ವಾದಿ ವಿಮರ್ಶಕ. ಆದರೆ, ಅದನ್ನು ಎಂದೂ ಅವರು ಕಣ್ಪಟ್ಟಿಯಾಗಿಸಿಕೊಳ್ಳಲಿಲ್ಲ. ಮಾರ್ಕ್ಸ್‌ವಾದದ ಆಚೆಗೆ ರಚನೆಗೊಂಡ ಸಾವಿರಾರು ಕೃತಿಗಳನ್ನು ಅಷ್ಟೇ ಪ್ರೀತಿಯಿಂದ ಓದಿದರು ಮತ್ತು ವಿಮರ್ಶಿಸಿದರು. ಅವರ ಈ ಗುಣ ನನಗೆ ತುಂಬಾ ಇಷ್ಟವಾಗಿತ್ತು. ವಿಮರ್ಶಕರು ಯಾವುದೇ ರೀತಿಯಿಂದಲೂ ಜಡಗೊಳ್ಳುವುದು ಅವರಿಗೆ ಇಷ್ಟವಿರಲಿಲ್ಲ. ಹೊಸ ಕೃತಿ ಬಂದಾಗ ಅದನ್ನು ಓದಿ ನಮಗೆಲ್ಲ ಓದಿಸುತ್ತಿದ್ದರು. ಹಲವು ಕಡೆ ಅದರ ಬಗ್ಗೆ ಮಾತನಾಡುತ್ತಿದ್ದರು. ತಮ್ಮ ಸುತ್ತಲಿನ ವಾತಾವರಣವನ್ನು ಜಡಗೊಳ್ಳಲು ಅವರು ಬಿಡುತ್ತಿರಲಿಲ್ಲ. ಜೊತೆಗೆ ಯಾವುದೇ ಕೃತಿಯ ಬಗ್ಗೆ ಅವರು ಬರೆದಾದ ಮೇಲೆ ಕೆಲ ಕಾಲದ ನಂತರ ಬೇರೆ ತರಹ ಆ ಕೃತಿ ತೋರಿದರೆ ಅದನ್ನು ಮುಲಾಜಿಲ್ಲದೆ ಹೇಳಿಬಿಡುತ್ತಿದ್ದರು. ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ಬದಲಿಸಿಕೊಳ್ಳಲು ಅವರು ಸಿದ್ಧರಿದ್ದರು. ಹಾಗೆ ಬದಲಿಸಿಕೊಳ್ಳುವುದು ಅವರು